ಆದರೆ, ನೀವು ಇಲ್ಲಿ ಏನು ಹೇಳಿದಿರಿ, ಆತ್ಮಸಾಕ್ಷಿಯಾಗಿ ನಾನು ಒಂದು ಅಕ್ಷರವನ್ನೂ ಬದಲಾವಣೆ ಮಾಡುವುದಿಲ್ಲವೆಂದು ಏನು ಹೇಳಿದಿರಿ, ಅದರ ಪ್ರಕಾರ ನೀವು ಇವತ್ತು ಕೊಡಬೇಕಾಗಿತ್ತು. ಮಾನ್ಯ ಎಂ.ವೈ.ಘೋರ್ಪಡೆ ಯವರು ಇದೇ ಪಂಚಾಯತ್ ಆಕ್ಟ್‌ನ್ನು ನಾವು ಒಪ್ಪಲಿಲ್ಲವೆಂದು ತಿಳಿದುಕೊಂಡು, ಸಚಿವ ಸಂಪುಟದ ವಿರುದ್ದ ಡಿಸೆಂಟ್ ನೋಟ್ ಕೊಟ್ಟು, ಕೊನೆಗೆ ನಾನು ರಾಜೀನಾಮೆ ಕೊಡುತ್ತೇನೆಯೇ ಹೊರತಾಗಿ ಇದಕ್ಕೆ ನಾನು ಒಪ್ಪುವುದಿಲ್ಲವೆಂದು ಹೇಳಿ ಮನೆಗೆ ಹೋದರು. ಅಷ್ಟಾದರೂ ನಿಮ್ಮಲ್ಲಿ ಕಿಂಚಿತ್ ಸ್ವಾಭಿಮಾನ ಇದ್ದರೆ, ರಾಜೀನಾಮೆ ಕೊಡಿ ಎಂದು ನಾನು ಹೇಳಿದೆ. ಅಧ್ಯಕ್ಷರೆ, ಇವರಿಗೆ ಸ್ವಾಭಿಮಾನವೂ ಇಲ್ಲ. ಆಮೇಲೆ ಕಾನೂನನ್ನು ಸರಿಯಾಗಿ ಜಾರಿಯಲ್ಲಿ ತರಬೇಕೆಂದೂ ಇಲ್ಲ. ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡಬೇಕೆಂಬ ದೃಷ್ಟಿಯಿಂದ ಬಂದಿದ್ದರೆ, ಜಿಲ್ಲಾ ಅಧ್ಯಕ್ಷರು ಎಷ್ಟಾಗಿದ್ದಾರೆ, ಅಪೆಕ್ಸ್ ಬೋರ್ಡ್‌ನಲ್ಲಿ ಎಷ್ಟು ಜನ ಅಧ್ಯಕ್ಷರನ್ನು ಮಾಡಿದ್ದೀರಿ. ಎಷ್ಟು ಜನ ಡೈರೆಕ್ಟರನ್ನು ಮಾಡಿದ್ದೀರಿ. ಇದೆಲ್ಲಾ ಇವತ್ತು ಹೊರಕ್ಕೆ ಬರಲಿ. ಅದಕ್ಕೆ ಇದು ಯಾವುದೂ ಕೂಡ ಇಲ್ಲ. ರಾಜಕೀಯ ದುರುದ್ದೇಶದಿಂದ ಕೂಡಿದಂಥ ಈ ಒಂದು ಕಾನೂನು ಇದೆ. ಇಂತಹ ಕರಾಳ ಕಾನೂನಿಗೆ ನಾವೆಲ್ಲರೂ ಕೂಡ ಪ್ರತಿಭಟಿಸುತ್ತೇವೆ. ನಾವು ಎಷ್ಟೇ ಮನವರಿಕೆ ಮಾಡಿಕೊಟ್ಟರೂ ಕೂಡ ಅವರು ಒಪ್ಪುತ್ತಾ ಇಲ್ಲ. ಅದಕ್ಕಾಗಿ ನಾವು ಪ್ರತಿಭಟನೆಯನ್ನು ತೋರಿಸಿ ಸಭಾತ್ಯಾಗ ಮಾಡುತ್ತೇವೆ.

(ಈ ಸಂದರ್ಭದಲ್ಲಿ ಕಾಂಗ್ರೆಸ್, ಬಿ.ಜೆ.ಪಿ.ರೈತಸಂಘದ ಸದಸ್ಯರು ಹಾಗೂ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು.)

**ಅಧ್ಯಕ್ಷರು :** ನಿಲುವಳಿ ಸೂಚನೆಗೆ ಅನುಮತಿ ತಡೆಹಿಡಿಯಲಾಗಿದೆ. ಶೂನ್ಯವೇಳೆಯ ವಿಷಯಗಳನ್ನು ನಾಳೆ ತೆಗೆದುಕೊಳ್ಳೋಣ. ಈಗ ಬೇಡಿಕೆಗಳ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ.

**ಶ್ರೀ ಎಂ.ಪಿ. ಪ್ರಕಾಶ್ :** ಮಾನ್ಯ ಭೈರೇಗೌಡರು ಶೂನ್ಯವೇಳೆಗೋಸ್ಕರ ಕಾದು ಕುಳುತುಕೊಂಡಿದ್ದಾರೆ. ಆದರೆ ತಮ್ಮ ಸಲಹೆ ಪ್ರಕಾರ, ಶೂನ್ಯವೇಳೆ ವಿಚಾರಗಳನ್ನು ತೆಗೆದುಕೊಳ್ಳುವುದಕ್ಕಿಂತ, ಬೇಡಿಕೆಗಳ ಬಗ್ಗೆ ಚರ್ಚೆಗೆ ತೆಗೆದುಕೊಳ್ಳುವುದೇ ಬಹಳ ಒಳ್ಳೆಯದು.

8. ವಿತ್ತೀಯ ಕಾರ್ಯಕಲಾಪಗಳು

1999-2000 ನೇ ಸಾಲಿನ ಈ ಕೆಳಕಂಡ ಅನುದಾನ ಬೇಡಿಕೆಗಳ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು.

| ಬೇಡಿಕೆ ಸಂಖ್ಯೆ : | ಬೇಡಿಕೆ ಹೆಸರು : |
|---|---|
| 28 | ವೈದ್ಯಕೀಯ ಶಿಕ್ಷಣ |
| 29 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು |
| 52 | ಸಹಕಾರ |
| 53 | ಕ್ರಮಪಡಿಸಿದ ಮಾರುಕಟ್ಟೆಗಳು |
| 54 | ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ |
| 55 | ಗ್ರಾಮೀಣಾಭಿವೃದ್ಧಿ |
| 26 | ವಾರ್ತಾ ಮತ್ತು ಪ್ರಚಾರ |
| 01 | ವ್ಯವಸಾಯ |
| 02 | ತೋಟಗಾರಿಕೆ |

03 ಪಶುಸಂಗೋಪನೆ

ಅನುದಾನ ಬೇಡಿಕೆಗಳು - 1999

ಬೇಡಿಕೆ ಸಂಖ್ಯೆ : 28 ವೈದ್ಯಕೀಯ ಶಿಕ್ಷಣ

**ಡಾ. ಎಂ. ಶಂಕರನಾಯಕ್** (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2000 ದಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ " ವೈದ್ಯಕೀಯ ಶಿಕ್ಷಣ " ಕ್ಕೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ ಬರುವ ಬೇಡಿಕೆ ಸಂಖ್ಯೆ 28 ಕ್ಕೆ ಸಂಬಂಧಿಸಿದಂತೆ, 67,34,29,000 ರೂಗಳು ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರ್ಮಾಡಿದ ಮೊಬಲಗನ್ನೂ ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು, ಲೇಖಾನುದಾನದಲ್ಲಿ ಮಂಜೂರ್ಮಾಡಿದ ಮೊತ್ತವೂ ಸೇರಿದಂತೆ , ಮಂಜೂರ್ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

**ಬೇಡಿಕೆ ಸಂಖ್ಯೆ : 29** – ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.

ಶ್ರೀ ಎಂ.ಪಿ.ಪ್ರಕಾಶ್( ಆರೋಗ್ಯ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2000 ದಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ 29 ಕ್ಕೆ ಸಂಬಂಧಿಸಿದಂತೆ " ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳಿಗೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 30,67,000 ರೂ. ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರ್ಮಾಡಿದ 38,26,95,000 ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ( ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಬೇಡಿಕೆ ಸಂಖ್ಯೆ : 52 - ಸಹಕಾರ

**ಶ್ರೀ ಎಸ್.ಎಸ್.ಪಾಟೀಲ್** (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000 ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ 52 ಕ್ಕೆ ಸಂಬಂಧಿಸಿದಂತೆ "ಸಹಕಾರ" ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 17,75,13,000 ರೂಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4,59,24,000 ರೂ ಗಳಿಗಿಂತ ಮೀರದ ಮೊತ್ತವನ್ನು ( ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ) ಮಂಜೂರ್ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಬೇಡಿಕೆ ಸಂಖ್ಯೆ : 53 - ಕ್ರಮಪಡಿಸಿದ ಮಾರುಕಟ್ಟೆಗಳು

**ಶ್ರೀ ಎಂ.ಪಿ. ಪ್ರಕಾಶ್** (ಮಾರುಕಟ್ಟೆ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2000 ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ 53 ಕ್ಕೆ ಸಂಬಂಧಿಸಿ ದಂತೆ "ಕ್ರಮಪಡಿಸಿದ ಮಾರುಕಟ್ಟೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 11,23,01,000 ರೂಗಳಿಗೆ ಮೀರದ

ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ) ಮಂಜೂರ್ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು .

ಬೇಡಿಕೆ ಸಂಖ್ಯೆ : 54 - ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ :

**ಶ್ರೀ ಎಂ.ಪಿ. ಪ್ರಕಾಶ್** (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ , ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2000 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ 54 ಕ್ಕೆ ಸಂಬಂದಿಸಿದಂತೆ "ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ" ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 82,07,51,000 ರೂ ಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 60,62,73,000 ರೂಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರ್ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ : 55 - ಗ್ರಾಮೀಣ ಅಭಿವೃದ್ಧಿ

**ಶ್ರೀ ಎಂ.ಪಿ. ಪ್ರಕಾಶ್** (ಗ್ರಾಮೀಣಾಭಿವೃದ್ಧಿ ಸಚಿವರು) :- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ 55ಕ್ಕೆ ಸಂಬಂಧಿಸಿದಂತೆ "ಗ್ರಾಮೀಣ ಅಭಿವೃದ್ಧಿ" ಗಾಗಿ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 210,68,44,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರ್ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಬೇಡಿಕೆ ಸಂಖ್ಯೆ : 26 - ವಾರ್ತಾ ಮತ್ತು ಪ್ರಚಾರ

**ಶ್ರೀ ಎಂ. ಪಿ. ಪ್ರಕಾಶ್** (ಗ್ರಾಮೀಣಾಭಿವೃದ್ಧಿ ಮತ್ತು ವಾರ್ತಾ, ಪ್ರಚಾರ ಸಚಿವರು) :- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ 26ಕ್ಕೆ ಸಂಬಂಧಿಸಿದಂತೆ " ವಾರ್ತಾ ಮತ್ತು ಪ್ರಚಾರ"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 5,67,03,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರ್ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಬೇಡಿಕೆ ಸಂಖ್ಯೆ : 01 - ವ್ಯವಸಾಯ

**ಶ್ರೀ ಎಂ.ಪಿ. ಪ್ರಕಾಶ್** (ಕೃಷಿ ಸಚಿವರ ಪರವಾಗಿ) :- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ 01ಕ್ಕೆ ಸಂಬಂಧಿಸಿದಂತೆ "ವ್ಯವಸಾಯ"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 101,14,06,000ರೂ.ಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4, 04, 40,000 ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾದಲ್ಲಿ ಮಂಜೂರಾದ ಮೊತ್ತವೂ

ಸೇರಿದಂತೆ) ಮಂಜೂರ್ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಬೇಡಿಕೆ ಸಂಖ್ಯೆ: 02 - ತೋಟಗಾರಿಕೆ

**ಶ್ರೀ ಎಂ.ಪಿ. ಪ್ರಕಾಶ** (ಕೃಷಿ ಮತ್ತು ತೋಟಗಾರಿಕೆ ಸಚಿವರ ಪರವಾಗಿ) :- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ 02ಕ್ಕೆ ಸಂಬಂಧಿಸಿದಂತೆ "ತೋಟಗಾರಿಕೆ"ಗೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 30,62,13,000 ರೂ.ಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 18,33,000 ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರ್ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಬೇಡಿಕೆ ಸಂಖ್ಯೆ : 3 - ಪಶುಸಂಗೋಪನೆ

**ಶ್ರೀ ಎಂ.ಪಿ. ಪ್ರಕಾಶ್** (ಪಶುಸಂಗೋಪನಾ ಸಚಿವರ ಪರವಾಗಿ) :- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ 3 ಕ್ಕೆ ಸಂಬಂಧಿಸಿದಂತೆ "ಪಶುಸಂಗೋಪನೆ" ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 47,19,35,000 ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರ್ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

**(9) ಅಧ್ಯಕ್ಷರ ಅಪ್ಪಣೆ ಮೇರೆಗೆ :**

ವಿಷಯ : ರಾಜ್ಯದಲ್ಲಿ ಕನ್ನಡ ಭಾಷೆಯನ್ನು ಕಡೆಗಾಣಿಸಿರುವ ಬಗ್ಗೆ ಮಾತನಾಡಿದ ವಿಷಯಗಳಿಗೆ ಅಧ್ಯಕ್ಷರು ನೀಡಿರುವ ತೀರ್ಪನ್ನು ಪುನರ್ ಪರಿಶೀಲಿಸುವ ಬಗ್ಗೆ

**ಶ್ರೀ ವಾಟಾಳ್ ನಾಗರಾಜ್** (ಚಾಮರಾಜನಗರ) :- ಮಾನ್ಯ ಅಧ್ಯಕ್ಷರೇ, ಇಂದು ಬೆಳಿಗ್ಗೆ ನಾನು ಪ್ರಶ್ನೋತ್ತರ ಕಾಲಕ್ಕೆ ಮುಂಚಿತವಾಗಿ, ಕನ್ನಡ ಆಡಳಿತ ಭಾಷೆ ಕರ್ನಾಟಕ ಸರ್ಕಾರ ಮಾಡಿಲ್ಲ, ಪ್ರಾಮಾಣಿಕವಾದ ಚಿಂತನೆ ನಡೆದಿಲ್ಲ, ಎಲ್ಲೆಲ್ಲೂ ಕನ್ನಡ ನಾಟುತ್ತಾ ಇಲ್ಲ ಪ್ರತಿ ಇಲಾಖೆಗಳಲ್ಲೂ ಕನ್ನಡವನ್ನು ಮರೆತಿದ್ದಾರೆ. ಈ ರಾಜ್ಯ ಸಮಗ್ರವಾಗಿ, ಕರ್ನಾಟಕ ಏಕೀಕರಣವಾದಾಗಿನಿಂದ ಎಲ್ಲಾ ಸರ್ಕಾರಗಳೂ ಕನ್ನಡವನ್ನು ಕಡೆಗಾಣಿಸಿದ್ದಾರೆ. ಹೊರನಾಡು ಕನ್ನಡಿಗರ ಬಗ್ಗೆ ಚಿಂತನೆ ಇಲ್ಲ. ಗಡಿನಾಡು ಕನ್ನಡಿಗರ ಬಗ್ಗೆ ಯಾವುದೇ ಗಮನವಿಲ್ಲವೆಂದು ಹೇಳಿ ನಿರಂತರವಾಗಿ ಈ ರಾಜ್ಯದ ಸಮಗ್ರ ಚಿಂತನೆ ಬಗ್ಗೆ ಅನ್ಯಾಯವಾಗಿದೆ ಎಂದು ನಾನು ಪ್ರಾರಂಭ ಮಾಡಿದೆ. ತಾವು ಹೇಳಿದಿರಿ, ಪ್ರಶ್ನೋತ್ತರವಾದ ನಂತರ ಮಾತನಾಡಿ ಎಂದು ಹೇಳಿದಿರಿ. ನಾನು ಹೇಳಿದೆ ನಿಜ ಇದರ ಅವಶ್ಯಕತೆ ಇದೆ, ಈಗಲೇ ಆಗಬೇಕು ಪ್ರಶ್ನೋತ್ತರ ಕಾಲವನ್ನು ಮುಂದೂಡಿ ಇದನ್ನು ಮಾಡಬೇಕೆಂಬ ಮಾತನ್ನು ಹೇಳಿದೆ. ಇಷ್ಟೆಲ್ಲಾ ಹೇಳಿ, ಆ ಇಂಗ್ಲೀಷಿನ ಕಡತವನ್ನು, ಯಾವುದು ಸರ್ಕಾರ ಆಡಳಿತ ಭಾಷೆ ಎಂದು ಹೇಳಿ, ಆಡಳಿತ ನಡೆಸುತ್ತೇವೆಂದು ಹೇಳಿ, ಒಂದು ಆಶಾಢಭೂತಿತನದಲ್ಲಿ ನಡೆದುಕೊಳ್ಳತಕ್ಕ ಸರ್ಕಾರದ ಒಂದು ನೀತಿಯನ್ನು ವಿರೋಧಿಸಿ, ಅದನ್ನು ಸುಟ್ಟುಹಾಕುತ್ತೇನೆಂದು ಹೊರಟೆ. ಇನ್ನೂ ಸುಡಲಿಲ್ಲ. ಸುಡುವ ಮಟ್ಟಕ್ಕೆ ನಾನು ಹೊರಟೆ. ಆಮೇಲೆ ನೀವೆಲ್ಲಾ ಇದು ಸರಿಯಿಲ್ಲವೆಂದು ಹೇಳಿದಾಗ, ಆಯಿತು ಹೊರಗಡೆ